## ಷೆಡ್ಯೂಲ್-II

**ಬೋಧನಾ ಸಿಬ್ಬಂದಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲು ಅನುಸರಿಸಬೇಕಾದ ಆಯ್ಕೆ ವಿಧಾನ**

1. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹುದ್ದೆಗೆ ನಿಗದಿಪಡಿಸಿದ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳಲ್ಲಿ ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಆಯ್ಕೆ ಮಂಡಳಿಯ ಜವಾಬ್ದಾರಿ ಆಗಿರುತ್ತದೆ.
2. ಆಯ್ಕೆ ಮಂಡಳಿಯು ನಡೆಸುವ ಸಂದರ್ಶನದಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವ ಗುಣವಿಶೇಷಣ ಅಂಶಗಳ ಬಗ್ಗೆ ಅಭ್ಯರ್ಥಿ ಗಳ ಬುದ್ಧಿಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಅಂಕ ನಿಗದಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು.

**ರಾಜ್ಯ ಒಕ್ಕಲಿಗರ ಸಂಘ**

**ಸಂದರ್ಶನ ಅಂಕ ನಿಗದಿ ಪಟ್ಟಿ**

| | |
|---|---|
| (1) ಸಂಸ್ಥೆಯ ಹೆಸರು | |
| (2) ನೇರ ನೇಮಕಾತಿ ನಡೆಸಲಾಗುತ್ತಿರುವ ಹುದ್ದೆ | |
| (3) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಯ ಹೆಸರು | |
| (4) ವಿದ್ಯಾರ್ಹತೆ ಮತ್ತು ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಶೇಕಡಾವಾರು ಅಂಕಗಳು | |
| (5) ವಯಸ್ಸು ಮತ್ತು ಜನ್ಮ ದಿನಾಂಕ | |

| ವಿವರಗಳು/ಇನ್‌ಪುಟ್ | ಗರಿಷ್ಠ ಅಂಕಗಳು | ಅಭ್ಯರ್ಥಿಯು ಪಡೆದ ಅಂಕಗಳು | ಷರಾ |
|---|---|---|---|
| (1) ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡವಾರು ಅಂಕಗಳು( ಶ್ರೇಣೀಕರಣ ಅನ್ವಯಿಸುವ ಕಡೆ)(*) | 70 | | |
| (2) ಬುದ್ಧಿಸಾಮರ್ಥ್ಯ, ಸಾಮಾನ್ಯಜ್ಞಾನ, ಅಭಿವ್ಯಕ್ತಿ, ಸಂವಹನ, ವರ್ತನೆ, ಜಾಣ್ಮೆ ಇತ್ಯಾದಿ ಮೌಲ್ಯಮಾಪನ | 20 | | |
| (3) ಗ್ರಾಮೀಣ ಅಭ್ಯರ್ಥಿಗಳಿಗೆ ನೀಡುವ ಕೃಪಾಂಕ(ಸಕ್ಷಮ ಪ್ರಾಧಿಕಾರದಿಂದ ಪಡೆದ ಸರ್ಟಿಫಿಕೇಟ್ ಹಾಜರುಪಡಿಸಿದಲ್ಲಿ) | 10 | | |
| ಒಟ್ಟು | 100 | | |

3. ಸಂದರ್ಶನ ಮುಗಿದ ನಂತರ ಆಯ್ಕೆ ಮಂಡಳಿಯ ನಡವಳಿಗಳನ್ನು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳ ವಿವರಗಳೊಂದಿಗೆ ನೇಮಕಾತಿ ಪ್ರಾಧಿಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.

(*) ಅರ್ಹತಾ ಪರೀಕ್ಷೆಗಳಲ್ಲಿ ಶ್ರೇಣಿಗಳನ್ನು ನೀಡಿರುವ ಸಂದರ್ಭಗಳಲ್ಲಿ, ಶೇಕಡಾವಾರು ಅಂಕಗಳಿಗೆ ಸಮಾನವಾದ ಶ್ರೇಣಿಯನ್ನು ಆಯಾ ಶೈಕ್ಷಣಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಕ್ರಮದಲ್ಲಿ ನಿರ್ಧರಿಸುವುದು.

(ಕೆ.ಹೆಚ್.ನರಸಿಂಹಮೂರ್ತಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.

Method of selection